**ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ಎಂ.ಬಿ.ಜಿ. ವಾದಿಯರ ಪರ ವಕೀಲರಿಂದಃ**

1. ದಾವಾದ ಆಸ್ತಿಯ ಮೌಲ್ಯ ಈಗ ನಾಲ್ಕು ಕೋಟಿ ಇದೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸಾಕ್ಷಿಗೆ ಪ್ರತಿವಾದ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ಸಹಿ ತನ್ನದು ಎಂದು ಒಪ್ಪಿಕೊಂಡಿರುತ್ತಾರೆ. ಸದ್ರಿ ಪ್ರತಿವಾದ ಪತ್ರವನ್ನು ನಿಪಿ-8 ಎಂದು, ಸದ್ರಿ ಪ್ರತಿವಾದ ಪತ್ರದ ಕೊನೆಯ ಪುಟದಲ್ಲಿರುವ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ವಕಾಲತ್ತನ್ನು ತೋರಿಸಲಾಗಿ, ಸದ್ರಿ ವಕಾಲತ್ತನಲ್ಲಿರುವ ಸಹಿ ತನ್ನದೆಂದು ಒಪ್ಪಿಕೊಂಡಿರುತ್ತಾರೆ, ಸದ್ರಿ ವಕಾಲತ್ತನ್ನು ನಿಪಿ-9 ಎಂದು, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

**2.** ನಾನೇ ದಾವಾಸ್ತಿಗೆ ಸಂಪೂರ್ಣ ಮಾಲೀಕಳಿರುತ್ತೇನೆ ಎಂದರೆ ಸರಿ. ಸದ್ರಿ ಆಸ್ತಿಯು ನನಗೆ ಓಎಸ್.ನಂ. 149/2015 ರಲ್ಲಿ ಆದಂತಹ ರಾಜಿ ಡಿಕ್ರಿ ಪ್ರಕಾರ ಬಂದಿರುತ್ತದೆ ಎಂದರೆ ಸರಿ. ಸದ್ರಿ ಆಸ್ತಿಗೆ ಸಂಬಂಧಿಸಿದ ಚೆಕ್‌ಬಂಧಿ ನನಗೆ ಗೊತ್ತಿದೆ ಎಂದರೆ ಸರಿ. ದಾವಾಸ್ತಿಯ ಚೆಕ್‌ಬಂಧಿಯನ್ನು ಖರೀದಿ ಕರಾರು ಪತ್ರದಲ್ಲಿ ನಾನು ಬರೆಯಿಸಿಲ್ಲ ಎಂದರೆ ಸಾಕ್ಷಿಯು ನನ್ನ ಗಂಡನಿಗೆ ಗೊತ್ತು ಎಂದು ನುಡಿಯುತ್ತಾರೆ. ಖರೀದಿ ಕರಾರು ಪತ್ರದಲ್ಲಿ ಒಂದು ವರ್ಷದೊಳಗಾಗಿ ಖರೀದಿ ಪತ್ರವನ್ನು ಮಾಡಿಸಿಕೊಳ್ಳುವಂತೆ ಬರೆದಿರುತ್ತೇನೆ ಎಂದರೆ ಸಾಕ್ಷಿಯು ಖರೀದಿ ಕರಾರು ಪತ್ರ ಕೊಟ್ಟಿದ್ದಲ್ಲ, ವ್ಯವಸಾಯ ಮಾಡಲು ನನ್ನ ಗಂಡ ರೂ. 5,00,000/- ಗಳನ್ನು ಪಡೆದಿದ್ದು ಅದರ ಭದ್ರತೆಗಾಗಿ ನಮ್ಮ ಹೊಲದ ಕಾಗದ ಪತ್ರವನ್ನು ಬರೆದುಕೊಟ್ಟಿದ್ದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-7 ನ್ನು ತೋರಿಸಲಾಗಿ ಸದ್ರಿ ಕಾಗದ ಪತ್ರ ಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಈ ಕಾಗದ ಪತ್ರ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ-7 ನ್ನು ತೋರಿಸಲಾಗಿ ಅದರಲ್ಲಿರುವ ಸಹಿಗಳು

ನನ್ನದೇ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಸದ್ರಿ ನಿಪಿ-7 ರ ಮೊದಲನೆ ಪುಟದಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-7(ಜಿ) ಎಂದು ಗುರುತಿಸಲಾಯಿತು. ನನ್ನ ಗಂಡ ವ್ಯವಸಾಯ ಮಾಡಲು ಹಣ ಪಡೆದಿದ್ದರು ಎನ್ನುವ ಬಗ್ಗೆ ನಿಪಿ-7 ರಲ್ಲಿ ಬರೆದಿರುತ್ತದೆ. ಆ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**3.** ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಬಿನ್ ಮೊಬದಲೆ ಅಂದರೆ ಏನು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಾನು ಹೇಳಿ ಬರೆಯಿಸಿಲ್ಲ ಎಂದರೆ ಸರಿ. ಖರೀದಿ ಕರಾರು ಪತ್ರ ಆಗುವ ಸಮಯಕ್ಕೆ ಕಾರ್ಪೋರೇಷನ್ ಬ್ಯಾಂಕ್, ಮಾಕನೂರ ಶಾಖೆಯ ಚೆಕ್ ನಂ. 039796 ಮೂಲಕ ರೂ. 5,00,000/- ಗಳು ನನ್ನ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಗಂಡನಿಗೆ ಎಲ್ಲ ಗೊತ್ತು ಎಂದು ನುಡಿಯುತ್ತಾರೆ.

**4.** ಓ.ಎಸ್. ನಂ. 149/2015 ನ್ನು ದಾಖಲು ಮಾಡಿದ್ದೆವು ಎನ್ನುವ ಬಗ್ಗೆ ಖರೀದಿ ಕರಾರು ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ಪ್ರಕಾಶ ದಳವಾಯಿ ನನ್ನ ಮೈದುನ, ಮಂಜುನಾಥ ದಳವಾಯಿ ಅಂದರೆ ನನ್ನ ಗಂಡ. ಸದ್ರಿಯವರಿಬ್ಬರೂ ಅಣ್ಣ-ತಮ್ಮಂದಿರು. ಓ.ಎಸ್. ನಂ. 164/2023 ನ್ನು ಮಂಜುನಾಥ ಪಾಟೀಲ ಎನ್ನುವವರು ನಮ್ಮ ಮೇಲೆ ದಾಖಲು ಮಾಡಿದ್ದರು. ಮರಳಿ ಹಣ ವಾಪಸ್ಸ ಕೊಡುವಂತೆ ಇಲ್ಲಾ ಹೊಲ ಕೊಡುವಂತೆ ದಾವೆ ದಾಖಲು ಮಾಡಿದ್ದರು. ಸದ್ರಿ ದಾವೆಯನ್ನು ಚೇತನ ಎನ್ನುವವರು ನನ್ನ ತಂಗಿಯಾದ ಶೋಭಾ ದಳವಾಯಿ ಎನ್ನುವವರ ಮೇಲೆ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶೋಭಾರವರು ಚೇತನರವರಿಗೆ ಖರೀದಿ ಪತ್ರ ಬರೆದು ಕೊಡಬೇಕೆಂದು ದಾವೆ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳಲ್ಲಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯರ ನಡುವೆ ಖರೀದಿ ಕರಾರು ಪತ್ರ ಆಗಿರುವುದು ನಿಜ ಇರುತ್ತದೆ ಎಂದರೆ ಸರಿಯಲ್ಲ.

ಈಗ ಆಸ್ತಿಯ ಕಿಮ್ಮತ್ತು ಕೋಟಿಗಟ್ಟಲೆ ಹೆಚ್ಚಾಗಿರುವುದರಿಂದ, ವಾದಿಗೆ ಖರೀದಿ ಕರಾರು ಪತ್ರ ಬರೆದುಕೊಟ್ಟಿದ್ದರೂ ಸಹ ಬರೆದುಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಖರೀದಿ ಕರಾರು ಪತ್ರದಲ್ಲಿ ಚೆಕ್‌ಬಂಧಿಯನ್ನು ತಪ್ಪಾಗಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಖರೀದಿ ಪತ್ರ ಬರೆದುಕೊಡಲು ಬಾಧ್ಯಸ್ಥರಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಸಲುವಾಗಿ ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರೀದಿ ಕರಾರು ಪತ್ರದ ಪ್ರಕಾರ ಪೋಡಿಯಾದ ನಂತರ ಕಾಗದ ಪತ್ರವನ್ನು ಸರಿಪಡಿಸಿಕೊಂಡು ತಿಳಿಸುತ್ತೇನೆಂದು ಹೇಳಿದ್ದು, ಆ ಪ್ರಕಾರ ವಾದಿಗೆ ನೋಟಿಸ ಕೊಟ್ಟಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅದೇಲ್ಲ ಸುಳ್ಳು ನಾವು ಹೊಲ ಮಾರುವುದಿಲ್ಲ ಎಂದು ಹೇಳಿದ್ದೆವು ಎಂದು ನುಡಿಯುತ್ತಾರೆ. ವಾದಿಯು ಅನೇಕ ಬಾರಿ ಬಂದು ಖರೀದಿ ಪತ್ರ ಬರೆದುಕೊಡುವಂತೆ ಹೇಳಿದ್ದರೂ ಸಹ ನಾನು ಒಂದಲ್ಲ ಒಂದು ಕಾರಣ ಹೇಳಿ ದಿನದೂಡುತ್ತಾ ಬಂದಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 11-07-2024 ರಂದು ವಾದಿಯು ನೋಟಿಸ ಕೊಟ್ಟಿದ್ದರು ಎಂದರೆ ಸರಿ.

ಮರು ವಿಚಾರಣೆ – ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

–ಸಹಿ–

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.